ಮಾಡ್ಸಿ" ಎಂದು ಹಟ ಹಿಡಿಯುತ್ತಿದ್ದ. ಅವನೇನು ಸುಮ್ಮನೆ ಹಟ ಹಿಡಿಯುತ್ತಿರಲಿಲ್ಲ; ಈ ಹಿಂದೆ ಅನೇಕ ಸಲ ಕೆಲಸದ ನಡುವೆ ಹತ್ಯಾರಗಳ ಮೊಂಡುತನದಿಂದಾಗಿ ಬೇಕಾರಾದ ಕೆಲಸದಾಳುಗಳು ಬಿಡಾರದಲ್ಲಿ ಇಸೀಟು ಆಡುತ್ತಲೊ ಬೇರೆ ಬಿಡಾರಗಳ ಕೋಳಿ ಕಂಬಳಕ್ಕೆ ಓಡಾಡುತ್ತಲೊ ಜೋಡಾಟಕ್ಕೆ ಪೇಟೆಗೆ ಹೋಗಿಯೊ ಕಾಲ ಹರಣವಾಗಿ ಉಂಟಾದ ನಷ್ಟದ ಅನುಭವ ಅವನಿಗೆ ಮರೆತಿರಲಿಲ್ಲ. "ಚಲೋ ಹತ್ಯಾರ ಕೊಡಿ ಮುದುಕರಿಗಾದರೂ ಎಳೆ ಹೆಣ್ಣ್ ನೋಡ್ದಾಂಗೆ ಉಮೇದಿ ಬರ್ತದೆ" ಎಂದು ಜಾನು ಕೆಲಸದ 'ಸಾಹಿತ್ಯ' ಎಂದು ಕರೆಯಲ್ಪಡುವ ಹತ್ಯಾರಗಳ ಮಹಿಮೆಯನ್ನು ಪೋಲಿ ರಸಿಕತೆಯಿಂದ ಕಣ್ಣು ಹೊಡೆದು ವಿವರಿಸುತ್ತಿದ್ದ. ಬಿಡಾರದ ವಿರಾಮದಲ್ಲಿ ಆಯಾಸದ ಅಮಲಿನಲ್ಲಿ ಗಂಡು ಮತ್ತು ಹೆಣ್ಣಾಳುಗಳ ರಸಿಕ ಲೀಲೆಗಳು ರಹಸ್ಯವಾಗಿ ಅವನ 'ಸಾಹಿತ್ಯ' ಪದ ಪ್ರಯೋಗದಲ್ಲಿ ಸೇರಿಕೊಂಡಿರುತ್ತಿದ್ದವೆಂದು ಅವನ ನಗುವಿನ ರೀತಿಯೇ ನನಗೆ ಹೊಳೆಯಿಸುತ್ತಿತ್ತು.

"ಮಂಜಪ್ಪಚಾರಿ ಈ ಕಡೆ ಮೊಕ ಹಾಕ್ದೆ ಎರಡು ವರ್ಷ ಆಯ್ತು. ಅವನ ಎಲ್ಲಿಂದ ಹುಡುಕಿ ತರಲಿ" ಎಂದು ನಾನು ಅಸಹಾಯಕತೆಯನ್ನು ತೋಡಿಕೊಂಡೆ.

"ಅವನು ಎಲ್ಲಿಗೆ ಹೋಗ್ತಾನೆ ಮಾವಿನ ಕುರ್ವೆಯಲ್ಲಿ ಬಿದ್ದಿರ್ತಾನೆ. ಗುತ್ತಿಗೆಯಲ್ಲಿ ನೂರು ರೂಪಾಯಿ ಕಮ್ಮಿ ಆದ್ರೂ ಹರಕತ್ತಿಲ್ಲ; ಹತ್ಯಾರ ಮಂಜಪ್ಪನಿಂದ ಹದ ಹಿಡ್ಸಿ ಕೊಡ್ಲಿಲ್ಲಾಂದರೆ ನಾನು ಕೆಲ್ಸ ಬಿಡ್ತೇನೆ. ಜಾನು ಮಾತು ಮುರಿದ ಎಂದು ನೀವು ಹೇಳಿದ್ರೂ ತಕರಾರಿಲ್ಲ." ಜಾನುವಿನ ಲಾಭಕ್ಕೂ ಮಂಜಪ್ಪಾಚಾರಿಯ ಹದಕ್ಕೂ ಏರ್ಪಟ್ಟ ವ್ಯಾವಹಾರಿಕ ಸಂಬಂಧಕ್ಕಿಂತ ಮಂಜಪ್ಪಾಚಾರಿಗೆ ಮಾತ್ರ ಸಾಧ್ಯವಿರುವ ನಿಗೂಢ ಹದ ವಿದ್ಯೆ ಬಗ್ಗೆ ನನಗೆ ಕುತೂಹಲ ಉಂಟಾಯಿತು. ನಾನು ಅಲ್ಲಗಳೆಯಲಾರದ ಅತ್ಯಂತ ಸೂಕ್ಷ್ಮ ವ್ಯಾವಹಾರಿಕ ಸತ್ಯವೊಂದು ಜಾನುವಿನ ಮಾತಿನಲ್ಲಿತ್ತು. "ಹತ್ಯಾರ ತಯಾರಾದ ಮಾರ್ನೆ ದಿನ ಫೋನ್ ಮಾಡಿ. ತಂಡ ಬಂತು ಅಂತ ತಿಳೀರಿ" ಎಂದು ಜಾನು ನನಗೆ ಜವಬ್ದಾರಿ ವಹಿಸಿ ಹೋದ.

ಜಾನು ಬಂದು ಹೋದ ಬಳಿಕ ಒಬ್ಬೊಬ್ಬರಾಗಿ ಊರಿನವರು ಗೋಣಿ ಪಾಟಿನಲ್ಲಿ ಮೊಂಡಾದ ಹತ್ಯಾರಗಳನ್ನು ಸುತ್ತಿ ತಂದು ನನಗೊಪ್ಪಿಸಿ ಹೋದರು. ಹಿಂದೆಲ್ಲ ಮಂಜಪ್ಪಾಚಾರಿ ಕುಲುಮೆ ಶಾಲೆಯನ್ನು ನಮ್ಮ ಮನೆಯ ಸನಿಹದ ಬಿಡಾರದಲ್ಲಿ ಆರಂಭಿಸಿ ತಿಂಗಳವರೆಗೆ ವಸತಿ ಇದ್ದು ಸುತ್ತ ಮುತ್ತಲಿನ ಹಳ್ಳಿಯವರ ಲೋಹದ ಸಲಕರಣೆಗಳನ್ನು ಕಾಯಿಸಿ, ಜಪ್ಪಿ, ಚೊಂಯ್ ಎಂದು ನೀರಿನಲ್ಲಿ ಮುಳುಗಿಸಿ ಅವುಗಳಿಗೆ ಮರು ಜನ್ಮ ಕೊಟ್ಟು ಹೋಗುತ್ತಿದ್ದದ್ದೇ ಇದಕ್ಕೆ ಕಾರಣ. "ಹೋದ ವರ್ಷದಂತೆಯೇ ಆಚಾರಿ ಬರೋದು ಗ್ಯಾರಂಟಿ ಇಲ್ಲ. ನಿಮ್ಮ ಹತ್ಯಾರಕ್ಕೆ ಜಂಗು ಬಂತು ಅಂತ ಹೇಳಿ ನನ್ನ ಬೈವಾಂಗೆ ಆಗಬಾರ್ದು ಅದಕ್ಕಾಗಿ ಹೇಳ್ದೆ" ಎಂದೆ. "ಯಾವಾಗ್ಲೊ ಒಂದು ಸಲ ಅಪ್ಪನ ಸಂಗ್ತಿಗೆ ಬೀಗ ತರೋದಕ್ಕೆ ಮಾವಿನ ಕುರ್ವೆಗೆ ಹೋಗಿ ಬಂದವ ನೀನು. ಜಾಗ ಹೊಸತಲ್ಲ; ಆಚಾರಿ ನಿನ್ನ ಮಾತು ಮೀರಂವಲ್ಲ. ಜಾನು ಕಥೆಯಂತು ನಿನಗೆ ಹೊಸತಾಗಿ ಹೇಳೋದು ಬ್ಯಾಡ. ಒಂಟು ಹಿಡ್ತದ ಒರಟು ಮನುಷ್ಯ. ನಮ್ಮ ಪರವಾಗಿ ನೀನೇ ಹೋಗೋದೆ" ಎಂದು ಮಡ್ಡು ಹತ್ಯಾರದವರೆಲ್ಲ ಸೇರಿ ಒತ್ತಾಯಿಸಿ ನನಗೇ ಪಟ್ಟ ಕಟ್ಟಿದರು.

ಮಂಜಪ್ಪಾಚಾರಿ ನಮ್ಮ ಮನೆಯನ್ನೆ ಆಯ್ದುಕೊಂಡಿರುವುದು, ಜಾನು ಮತ್ತು ಊರಿನವರು ಹದದ ಹೊಣೆಯನ್ನು ನನಗೇ ವಹಿಸಿದ್ದು ಅದನ್ನು ನಾನೊಂದು ವಿಧಿ ಎಂಬಂತೆ ಒಪ್ಪಿದ್ದನ್ನು ಕೇವಲ ವ್ಯಾವಹಾರಿಕ ಹೊಂದಾಣಿಕೆಯ ಸತ್ಯ ಎಂದು ನಾನು ತಿಳಿಯಲಾರೆ.

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಮ್ಮೂರಿನ ಅನೇಕ ಮನೆಗಳ ಬಾಗಿಲು, ಹಣವಿಡುವ